

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಎಮಿರಿಟಸ್ ಪ್ರಾಧ್ಯಾಪಕರಾಗಿದ್ದಾರೆ. 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಅವರ ಹಾಗೂ ಕನ್ನಡದ ಮಹತ್ವದ ಕಾದಂಬರಿಗಳಲ್ಲಿ ಒಂದು.

'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ' ಮತ್ತು 'ಕಳೆದ ಮಂಗಳವಾರ ಮುಸ್ಸಂಜೆ' ಅವರ ಕಥಾಸಂಕಲನಗಳು. 'ಬಾರೋ ಗೀಜಗನೆ', 'ನಿಕ್ಷೇಪ' ಅವರ ಇನ್ನೆರಡು ಕಾದಂಬರಿಗಳು. ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ಅವರು ಸಂಪಾದಿಸಿದ ವಿಶ್ವಕೋಶ 'ಎನ್‌ಸೈಕ್ಲೋಪಿಡಿಯಾ ಆಫ್ ಫೋಕ್‌ಕಲ್ಚರ್ ಆಫ್ ಕರ್ನಾಟಕ' ಕನ್ನಡ ಜಾನಪದವನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸುತ್ತದೆ. ಇದನ್ನು ಹನೂರು ಚೆನ್ನೈನಲ್ಲಿ ನಾಲ್ಕು ವರ್ಷ ಇದ್ದು ಸಂಪಾದಿಸಿದ್ದಾರೆ. ಇದನ್ನು ಚೆನ್ನೈನ 'ಇನ್‌ಸ್ಟಿಟ್ಯೂಟ್ ಆಫ್ ಏಷ್ಯನ್ ಸ್ಟಡೀಸ್' ಪ್ರಕಟಿಸಿದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರವಾಗಿದ್ದು, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಹನೂರರು ಶಾಸನ, ಹಳಗನ್ನಡ ಮತ್ತು ಜಾನಪದ ಅಧ್ಯಯನಗಳ ಕೊಂಡಿಯಂತಿದ್ದಾರೆ. 'ಬೇರು' ಚಲನಚಿತ್ರಕ್ಕೆ ಅವರು ಬರೆದ ಹಾಡಿಗೆ ರಾಜ್ಯಪ್ರಶಸ್ತಿ ದೊರೆತಿದೆ. ಅವರ ಜಾನಪದ ಅಧ್ಯಯನದ ಅನುಭವಗಳನ್ನು ಒಳಗೊಂಡ ಗ್ರಂಥ 'ಕಾಲುದಾರಿಯ ಕಥನ' ಇತ್ತೀಚೆಗೆ ಪ್ರಕಟವಾಗಿದೆ. ಜಾನಪದ, ಹಳಗನ್ನಡ, ಬದುಕು, ಸಾಹಿತ್ಯ ಮತ್ತಿತರ ಸಂಗತಿಗಳ ಬಗ್ಗೆ ಮಾತನಾಡಿದ್ದು ಇಲ್ಲಿದೆ.

**● ಜಾನಪದ ಅಧ್ಯಯನವೆಂದರೆ ನಿಮ್ಮ ಪಾಲಿಗೆ ಜನರ ಅಧ್ಯಯನ, ಊರು ಕೇರಿಗಳ ಜೀವಪರ ಅಧ್ಯಯನ. ಕಥನ, ಕಲಾವಿದ ಮತ್ತು ಚರಿತ್ರೆಗಳನ್ನು ಅವರ ನಂಬಿಕೆಗಳ ನೆಲೆಯಲ್ಲಿ ನೀವು ಪರಿಭಾವಿಸುವಿರಿ. ಇದೊಂದು ಅತ್ಯಗತ್ಯ ಪರಿಚಾರಿಕೆ ಎಂಬುದು ನಿಮ್ಮ ಭಾವನೆ. ನಿಮ್ಮ ಇತ್ತೀಚಿನ ಪುಸ್ತಕ 'ಕಾಲುದಾರಿಯ ಕಥನಗಳು' ಜಾನಪದ ಜೀವನ ಕಥನವೆಂದೇ ಹೊರಬಂದಿದೆ. ಏಕಕಾಲಕ್ಕೆ ಇದು ಆತ್ಮಕಥನವಾಗಿಯೂ, ಸಾಂಸ್ಕೃತಿಕ ಚರಿತ್ರೆಯಾಗಿಯೂ ಕಾಣುತ್ತದೆ. ಪ್ರತಿ ಅಧ್ಯಯನಕಾರನೂ ಈ ರೀತಿಯ ಹೊತ್ತಿಗೆಗಳ ಮೂಲಕ ಪೂರಕ ಚರಿತೆಯ ಕಟ್ಟುವಿಕೆಗೆ ಕೈ ಜೋಡಿಸಬಹುದು ಎನಿಸುತ್ತದೆ...**

ಜಾನಪದ ಓದಿದವರು ಮಾತ್ರ ಈ ಬಗೆಯ ಅಧ್ಯಯನ ಮಾಡಬಹುದು ಎಂದೇನಿಲ್ಲ. ಮಾನವಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಸಾಹಿತ್ಯ ಓದಿದವರೆಲ್ಲ ಗ್ರಾಮಜೀವನವನ್ನು ಅಧ್ಯಯನ ಮಾಡಬಹುದು ಎನಿಸುತ್ತದೆ. ಜಾನಪದವನ್ನು ಎಂದೂ ಶಾಸ್ತ್ರೀಯವಾಗಿ ಅಧ್ಯಯನ ಮಾಡದ ನಾನು ಅಕಸ್ಮಾತ್ತಾಗಿ 1950ರ ಕಾಲಕ್ಕೆ ವಿದ್ಯುತ್ ಮತ್ತು ಬಸ್ಸೇ ಇಲ್ಲದ ಹಳ್ಳಿಯಲ್ಲಿ ಹುಟ್ಟಿ ವಿದ್ಯಾಭ್ಯಾಸ ಮಾಡಿದಂತೆಯೇ ಆಮೇಲಾಮೇಲೆ ಜಾನಪದ ಜಗತ್ತಿಗೆ ಪ್ರವೇಶಿಸಿದೆ. ಇಲ್ಲಿ ನಾನು ಜಾನಪದ ಜಗತ್ತನ್ನು ಪ್ರವೇಶಿಸಿದೆ ಎಂದರೆ ತಪ್ಪೋ ಏನೋ ಎನಿಸುತ್ತಿದೆ. ನಮ್ಮೆಲ್ಲರ ವಾತಾವರಣವೆ ಜಾನಪದದ್ದಲ್ಲವೇ. ನಾನು ಹೋಗಿ ಸೇರಿದ ಚಿತ್ರದುರ್ಗ ಸೀಮೆಯಲ್ಲಿ ಐತಿಹಾಸಿಕ